REVIEW OF RESEARCH
IMPACT FACTOR : 5.7631(UIF) UGC APPROVED JOURNAL NO. 48514 ISSN: 2249-894X
VOLUME - 7 | ISSUE - 12 | SEPTEMBER - 2018

# ದಟ್ಟಿ ಕುಣಿತ : ಒಂದು ಜನಪದ ಕಲೆ

ಮಹಾದೇವ ಚಂದ್ರಪ್ಪ ಪೋತರಾಜ[1] , ಡಾ. ಮಹೇಶ ಫ. ಗಾಜಪ್ಪನವರ[2]
[1]ಸಂಶೋಧನಾ ವಿದ್ಯಾರ್ಥಿ, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ವಿದ್ಯಾಸಂಗಮ, ಬೆಳಗಾವಿ.
[2]ಮಾರ್ಗದರ್ಶಕರು, ಸಹಾಯಕ ಪ್ರಾಧ್ಯಾಪಕರು , ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ವಿದ್ಯಾಸಂಗಮ, ಬೆಳಗಾವಿ.

## ABSTRACT:
ಉತ್ತರ ಕರ್ನಾಟಕದ ಗೋಕಾವಿ ನಾಡಿನಲ್ಲೇ ದೇವಿಯ ಆರಾಧಕರ ಕುಟುಂಬಗಳಿಂದ 'ಆಳು ಮಕ್ಕಳ ಆಟ' ಎಂದು ಹುಟ್ಟಿ ಬೆಳದದ್ದೆ ಈ ದಟ್ಟಿ ಕುಣಿತ. ಸಕಲ ವಾದ್ಯ ಮೇಳದೊಂದಿಗೆ ಪರಂಪರಾಗತವಾಗಿ ಬೆಳೆದು ಬಂದಿದೆ. ಆದರೆ ನಿರ್ಧೀಷ್ಟವಾದ ಕಾಲಮಾನ ದೊರಕಲಾರದು. ಕಲಾವಿದರ ಹಾಗೂ ಅನೇಕ ಲೇಖನಗಳಿಂದ ಈ ಕಲೆಯು ಸುಮಾರು ಮೂರು ನಾಲ್ಕು ತಲೆಮಾರುಗಳಿಂದ ನಡೆದುಬಂದದ್ದು ಗೊತ್ತಾಗುತ್ತದೆ. ಗೋಕಾಕ ತಾಲೂಕಿನ ಅನೇಕ ಹಳ್ಳಿಗಳಲ್ಲಿ ಈ ದಟ್ಟಿ ಕುಣಿತ ಕಲಾ ತಂಡಗಳಿವೆ. ದಟ್ಟಿ ಎಂದರೇನು? ಈ ಕಲೆ ಹೇಗೆ ಹುಟ್ಟಿತು? ಹೇಗೆ ಬೆಳೆದು ಬಂತು? ಹಾಗೂ ಆಧುನಿಕವಾಗಿಯೂ ಪರಿವರ್ತಣೆಯಾಗುತ್ತಿರುವ ಅನೇಕ ವಿಷವನ್ನು ಕುರಿತು ಲೇಖನದಲ್ಲಿ ಪ್ರಸ್ತಾಪಿಸಲಾಗಿದೆ.

## ದಟ್ಟಿ ಕುಣಿತ ಹುಟ್ಟಿ ಬೆಳದ ವಿಚಾರ :

ಕರ್ನಾಟಕ ರಾಜ್ಯದಲ್ಲಿ ಜನಪದಿಯವಾಗಿ ಅನೇಕ ಕಲೆಗಳು ಬೆಳೆದು ಬಂದಿವೆ. ದಕ್ಷಿಣ ಕರ್ನಾಟಕದಲ್ಲಿ ಯಕ್ಷಗಾನ ಬಯಲಾಟವು ಪ್ರಸಿದ್ದವಾದರೆ, ಉತ್ತರ ಕರ್ನಾಟಕದಲ್ಲಿ ಶ್ರೀಕೃಷ್ಣ ಪಾರಿಜಾತ ಮತ್ತು ದಟ್ಟಿ ಕುಣಿತ ಕಲೆಗಳು ಪ್ರಸಿದ್ದಿಪಡೆದಿವೆ. ಉತ್ತರ ಕರ್ನಾಟಕದ ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನಲ್ಲಿರುವ ದಟ್ಟಿ ಕುಣಿತಕ್ಕೆ ಎಲ್ಲಿಲ್ಲದ ಬೇಡಿಕೆ ಈಗಲೂ ಇದೆ. ದಟ್ಟಿ ಕುಣಿತವು ಯಾವುದೇ ಸಂಭಾಷಣೆ, ಹಾಡುಗಳಿಲ್ಲದೆ ಕೇವಲ ವಾದ್ಯ ಮೇಳಗಳೊಂದಿಗೆ ನಡೆಯುವ ಜನಪದ ನೃತ್ಯ. ಈ ಕಲಾ ತಂಡದಲ್ಲಿ ಹತ್ತರಿಂದ ಹದಿನೈದರವರೆಗೆ ಕಲಾವಿದರು ಒಂದೇ ತರದ ನೃತ್ಯ ಮಾಡುತ್ತಾರೆ. ಅದಕ್ಕೆ ಬೇಕಾದಷ್ಟು ತರಬೇತಿಯನ್ನು ಕಲಾವಿದರು ಪಡೆದುಕೊಂಡಿರುತ್ತಾರೆ. ದಟ್ಟಿಕುಣಿತದ ಕಾಲಮಾನವನ್ನು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಆದರೆ ಮೂರು ನಾಲ್ಕು ತಲೆಮಾರಿನಿಂದ ನಡೆದು ಬಂದ ಭಕ್ತಿ ಪ್ರಧಾನ ಕಲೆ ಎಂದು ಕಲಾವಿದರು ಹೇಳುತ್ತಾರೆ. 18ನೇ ಶತಮಾನದಲ್ಲೇ ದಟ್ಟಿ ಕುಣಿತ ಇದ್ದ ಬಗ್ಗೆ ಕಲಾವಿದರು ಹೇಳುವ ತಲೆಮಾರುಗಳ ಆಧಾರ ಮೇಲೆ ಗುರುತ್ತಿಸಬಹುದು. ಇದುವರೆಗೆ ದಟ್ಟಿ ಕುಣಿತ ಕುರಿತು ಹಲವು ಲೇಖನ, ಸಂಶೋಧನ ವಿಚಾರಗಳು ಬಂದರೂ ಸ್ಪಷ್ಟತೆ ಕಂಡುಬಂದಿಲ್ಲ. ಕಲೆ ಪರಂಪರಾಗತವಾಗಿ ಬಂದಿರುವುದಂತು ಸತ್ಯ. ಈ ಕಲೆಯನ್ನು ಕಲಾವಿದರು ದೇವರಿಗಾಗಿ ಅಥವಾ ದೇವರ ಸೇವೆಗಾಗಿ ಅಂದರೆ ಭಕ್ತಿಗಾಗಿ ಕಲಿಯುತ್ತ ಆಡುತ್ತ ಕುಣಿಯುತ್ತ ಬಂದಿದ್ದಾರೆ ಹೊರತು, ಸಂಪದಾನೆಗಾಗಿ, ವೃತ್ತಿಗಾಗಿ ಅಲ್ಲವೇ ಅಲ್ಲ. ಗ್ರಾಮ ದೇವತೆಯ ಆರಾಧನೆಗಾಗಿ, ದೇವಿಯ ಆಳು ಮಕ್ಕಳು ಮಾಡುವ ಭಕ್ತಿ ಕುಣಿತವಾಗಿದೆ. ಭಕ್ತಿಗಾಗಿ ವಾಲಗ ಮೇಳ, ದೀರ್ಘದಂಡನೆ ನಮಸ್ಕಾರ, ವೀರಭದ್ರನ ಪುರವಂತರು, ವೀರಗಾಸೆ, ಚೌಡಕಿಹಾಡು, ಡೊಳ್ಳಿನಹಾಡು, ಭಜನೆ ಇವು ಹೇಗೆ ಅನೇಕ ಕಲೆಗಳು ನಡೆಯುತ್ತ ಬಂದಿವೆಯೋ ಹಾಗೇಯೇ ದಟ್ಟಿ ಕುಣಿತವನ್ನು ಕೂಡಾ ಭಕ್ತಿಗಾಗಿ ಮಾಡುತ್ತ ಬಂದಿದ್ದಾರೆ. ದಟ್ಟಿ ಕುಣಿತವನ್ನು ಅನೇಕ ಸಂಶೋಧಕರು ನೋಡಿ ಅದರ ಬಗ್ಗೆ ಕೇಳಿ ಲೇಖನಗಳನ್ನು ಬರೆದಿದ್ದಾರೆ. ಆದರೆ ಅದರ ಬಗ್ಗೆ ಇನ್ನೂ ಸಂಶೋಧನೆ ನಡೆಸುವ ಅವಶ್ಯಕತೆ ಇದೆ. 'ದಟ್ಟಿ' ಎಂಬ ಪದದ ಕುರಿತು ವಿವೇಚಿಸಿದಾಗ 'ದಟ್ಟಿ' ಪದ ಕೈ 'ತಟ್ಟಿ' ತಾಳ 'ತಟ್ಟಿ' ಕುಣಿ ಎನ್ನುತ್ತಾ ದಟ್ಟಿ ಕುಣಿತ ಎಂದು ಬದಲಾಗಿರಬಹುದು. ಇಲ್ಲವೆ ದೇವಿಯ ದಟ್ಟಿ (ಸೀರೆ)ಯನ್ನು ನಡಿಗೆ (ಸೊಂಟಕ್ಕೆ) ಸುತ್ತಿ ಕೊಂಡು ಕುಣಿಯುವುದರಿಂದ 'ದಟ್ಟಿ' ಪದ ಬಂದಿದೆ. ಅಥವಾ ಕುಣಿತದಲ್ಲಿ ಬಹಳ ಜನ ಕಲಾವಿದರಿರುವುದರಿಂದ 'ದಟ್ಟ' ಜನ ಕುಣಿತವೇ ಮುಂದೆ 'ದಟ್ಟಿ' ಕುಣಿತ ಆಗಿರಬಹುದು. ದೇವಿಯನ್ನು ಒಲಿಸಿ ಕೊಳ್ಳಲು ಮಾಡಿದ ದಿಟ್ಟ (ಹಠದ) ಕುಣಿತಕ್ಕೆ ದಿಟ್ಟ ಪದದ ಬದಲು ಮುಂದೆ ಬರುಬರುತ್ತ 'ದಟ್ಟಿ' ಆಗಿರಬಹುದು. ಅನೇಕ ದೃಷ್ಟಿಕೋನಗಳಿಂದ ನೋಡಿದರೆ 'ದಟ್ಟಿ' ಪದದ ಬಗ್ಗೆ ಸಾಕಷ್ಟು ವಿಚಾರಗಳು ಹೊಳೆಯುತ್ತವೆ. ಆದರೆ ಕಲಾವಿದರ ಹೇಳಿಕೆಯ ಪ್ರಕಾರ 'ದೇವಿಯ ದಟ್ಟಿ



(ಸೀರೆ)ಯನ್ನು ಸುತ್ತಿಕೊಂಡು ಕುಣಿತ ಮಾಡುವುದರಿಂದ ದಟ್ಟಿ ಕುಣಿತ ಎಂದು ಹೆಸರು ಬಂದಿದೆ ಎನ್ನುತ್ತಾರೆ ಕಲಾವಿದರು.

**ತಂಡ ರಚನೆ ಮತ್ತು ಕುಣಿತ:**

ದಟ್ಟಿ ಕುಣಿತದಲ್ಲಿ ಐದು, ಏಳು, ಒಂಬತ್ತು, ಹನ್ನೊಂದು, ಹದಿನೈದು ಸಂಖ್ಯೆಯಲ್ಲಿ ಕಲಾವಿದರಿರುತ್ತಾರೆ. ಅಂದರೆ ಬೆಸಸಂಖ್ಯೆಯಿಂದ ಕಲಾವಿದರ ತಂಡ ತಯ್ಯಾರಿಸಲಾಗುತ್ತದೆ. ಎಲ್ಲಾ ಕಲಾವಿದರು ಸಮವಸ್ತ್ರ ಧರಿಸಿರುತ್ತಾರೆ. ಹೆಚ್ಚಾಗಿ ಕೆಂಪು ಬಣ್ಣದ ಬಟ್ಟೆ ಹಾಕಿ, ತಲೆಗೆ ಹಳದಿ ಅಥವಾ ಕೆಂಪು ಬಣ್ಣದ ಪೇಟಾ ಸುತ್ತಿರುತ್ತಾರೆ. ನಡುವಿಗೆ (ಸೊಂಟಕ್ಕೆ) ದೇವಿಯ ದಟ್ಟಿಯನ್ನು ಸುತ್ತಿರುತ್ತಾರೆ. ಇಬ್ಬರು ತಾಳು ಬಾರಿಸಿದರೆ, ಒಬ್ಬ ದಿಮ್ಮು ಬಾರಿಸುತ್ತಿರುತ್ತಾನೆ. ತಾಳಕ್ಕೆ ತಕ್ಕಂತೆ ಕಲಾವಿದರು ಕುಣಿತ ಮಾಡುತ್ತಾರೆ. ಕೆಲವರು ಸನಾದಿ ಮತ್ತು ಕೊಳಲನ್ನು ಬಳಸುತ್ತಾರೆ. ದಟ್ಟಿ ಕುಣಿತದ ಕಲಾವಿದರು ಮೊದಲು ಒಂದೇ ಸಾಲಾಗಿ ನಿಂತು ಸಾಲು ಕುಣಿತ ಮಾಡುತ್ತಾರೆ. ಎರಡೂ ಕೈಯಲ್ಲಿ ಹಿಡಿದಿರುವ ಬಣ್ಣ ಬಣ್ಣದ ವಸ್ತ್ರಗಳನ್ನು ಪ್ರದರ್ಶಿಸುತ್ತಿರುತ್ತಾರೆ. ಮುಖ್ಯ ಕಲಾವಿದನನ್ನು ಮಧ್ಯ ನಿಲ್ಲಿಸಿ ದುಂಡು ಕುಣಿತ ಮಾಡುತ್ತಾರೆ. ಮಧ್ಯದಲ್ಲಿದ್ದ ಕಲಾವಿದ ಯೋಗಾಸನದ ಭಂಗಿಗಳಂತೆ ವಿವಿಧ ಕಸರತ್ತು ಮಾಡುತ್ತಿರುತ್ತಾನೆ. ನಂತರ ಸಾಲಾಗಿ ನಿಂತು ಹಿಂಗಾಣಿ, ಮುಂಗಾಣಿ ಕುಣಿತ ಮಾಡುತ್ತಾರೆ. ನವಿಲು ಕುಣಿತ, ಹಾರಿಕೆ–ಬೀರಿಕೆ ಹೀಗೆ ಅನೇಕ ನವನವಿನ ಹೆಜ್ಜೆಗಳನ್ನು ಹಾಕಿ ಕುಣಿಯುತ್ತಾರೆ. ಯಾವುದೇ ಹೆಜ್ಜೆ ಹಾಕಿದರೂ ಕುಣಿಯುವಾಗ ಒಂದು ಕೈ ಮೇಲೆ ಇದ್ದಾಗ ಇನ್ನೊಂದು ಕೆಳಗೆ ಇರುತ್ತದೆ. ಕೈ ಕಾಲಿಂದಲೂ ಬೇರೆ ಬೇರೆ ಪ್ರದರ್ಶನ ಮಾಡುತ್ತಾರೆ. ಎಲ್ಲರ ಕುಣಿತ ಏಕಮಯವಾಗಿರುತ್ತದೆ.

**ದಟ್ಟಿ ಅಥವಾ ದೀಪರತ್ನ ಕುಣಿತ ಹಾಗೂ ಪ್ರದರ್ಶನಗಳು:**

ಈ ದಟ್ಟಿ ಕುಣಿತವನ್ನು ಧರ್ಮಟ್ಟಿಯಂತ ಗ್ರಾಮದ ಕಲಾವಿದರು ಸ್ವಲ್ಪ ಮಾರ್ಪಾಡು ಮಾಡಿಕೊಂಡು, ಈ ಕುಣಿತಕ್ಕೆ ದೀಪರತ್ನ ಕುಣಿತವೆಂದು ಸ್ವಲ್ಪ ಬದಲಾಯಿಸಿ ಕೊಂಡಿದ್ದಾರೆ. ದೀಪರತ್ನ ಕುಣಿತ ಮತ್ತು ದಟ್ಟಿ ಕುಣಿತ ಒಂದೇ ಯಾದರೂ ದೀಪರತ್ನ ಕುಣಿತ ಕಲಾವಿದರು ತಲೆಯ ಮೇಲೆ ಸಮೆ (ದೀಪ) ಇಟ್ಟುಕೊಂಡಿರುತ್ತಾರೆ. ವಸ್ತ್ರಾಭರಣ, ಕಾಲ್ಗೆಜ್ಜೆ, ವಾದ್ಯ ಮೇಳ ಎರಡರಲ್ಲೂ ಒಂದೇ ರೀತಿಯಿಂದ ಕೂಡಿರುತ್ತದೆ. ಹೆಜ್ಜೆ ಕುಣಿತವನ್ನು ಅನೇಕ ಭಂಗಿಗಳಿಂದ ಪ್ರದರ್ಶಿಸಿದರೂ ದೀಪ ಮಾತ್ರ ಬೀಳದಂತೆ ನೋಡಿಕೊಳ್ಳುತ್ತಾರೆ. ಹಿಂಗಾಣಿ, ಮುಂಗಾಣಿ, ಸಾಲು ಕುಣಿತ, ದುಂಡು ಕುಣಿತ, ಹಾಗೂ ಕುಳಿತು ಕುಣಿತ, ಮಲಗಿ ಕೂಡಾ ಕುಣಿಯುತ್ತಾರೆ. ಹೊಟ್ಟೆ, ಎದೆ, ನೆಲಕ್ಕೆ ಹಚ್ಚಿ ಉದ್ದಕ್ಕೆ ಮಲಗಿ ನೆಲಕ್ಕೆ ಇಟ್ಟ ನೋಟುಗಳನ್ನು ಬಾಯಿಂದ ಹಿಡಿದು ಎದ್ದರೂ ದೀಪಮಾತ್ರ ನೆಲಕ್ಕೆ ಬೀಳದಹಾಗೆ ಕಾಯ್ದುಕೊಳ್ಳುತ್ತಾರೆ. ಜಗಜಗಿಸುವ ಸಮೆಗಳು ತಲೆಮೇಲೆ ಹೊಳೆಯುತ್ತಿರುತ್ತವೆ. ದಿಮ್ಮು, ತಾಳ, ಸನಾದಿಗಳ ಮೇಳದಲ್ಲಿ ಕುಣಿತ ಹೆಚ್ಚು ಆಕರ್ಷಣೆಗೆ ಒಳಗಾಗುತ್ತದೆ. ಈ ಕುಣಿತವನ್ನು ಮಾಡುವ ಕಲಾವಿದರು ಹೆಚ್ಚಾಗಿ ಕುರುಬ ಹಾಗೂ ಬೇಡರ ಜನಾಂಗದವರು ಮಾಡಿಕೊಂಡು ಬಂದಿದ್ದಾರೆ. ಎಪ್ಪತ್ತು ಎಂಬತ್ತು ವರ್ಷ ವಯಸ್ಸಿನ ಹಿರಿಯರು ಕೂಡಾ ದಟ್ಟಿ ಕುಣಿತ ಮಾಡುತ್ತಾರೆ. ಇಂದಿಗೂ ಈ ಕಲೆಯನ್ನು ದೇವಿಯ ಸೇವೆ ಎಂದೇ ಭಾವಿಸುತ್ತಾರೆ. ಮಹಾನವಮಿ ಹಬ್ಬದಲ್ಲಿ ದೇವಿಯ ಮುಂದೇ ಬತ್ತಿ ಹಾಕಿದಾಗ ಒಂಬತ್ತೂ ದಿನ ರಾತ್ರಿ ದಟ್ಟಿ ಕುಣಿತ ಹಿಂದೆ ಹಿರಿಯರು ಮಾಡುತ್ತಿದ್ದರು. ದೇವಿಯ ಆಳು ಮಕ್ಕಳಾಗಿ ಪ್ರತಿ ಮಂಗಳವಾರ ಮತ್ತು ಶುಕ್ರವಾರ, ವಾರಾ ಹಿಡಿದಾಗ ಹಾಗೂ ದೇವಿಯ ಜಾತ್ರೆಯಲ್ಲಿ ಓಲಗ, ಡೊಳ್ಳಿನ ಹಾಡು ಹಾಗೂ ಈ ದಟ್ಟಿ ಕುಣಿತ ನಿರಂತರವಾಗಿ ನಡೆದುಕೊಂಡು ಬಂದ ಜನಪದಿಯ ಸಂಪ್ರದಾಯವಾಗಿದೆ. ದಟ್ಟಿ ಕುಣಿತವನ್ನು ಗೋಕಾಕ ತಾಲೂಕಿನ ಪ್ರಸಿದ್ದ ಕಲೆ ಎಂದು ಮತ್ತು ಗೋಕಾಕ ತಾಲೂಕಿನಲ್ಲೇ ಹುಟ್ಟಿದ ಕಲೆ ಎಂದು ಹೆಮ್ಮೆಯಿಂದ ಕಲಾವಿದರು ಹೇಳುತ್ತಾರೆ. ಆಧುನಿಕ ತಂತ್ರಜ್ಞಾನದ ಇಂದಿನ ದಿನಮಾನಗಳಲ್ಲಿಯೂ ಕಲೆಯೂ ಜೀವಂತವಾಗಿರುವುದು ಪವಾಡವೆ ಸರಿ. ಅನಕ್ಷರಸ್ಥ ಹಿರಿಯರು, ಸರಕಾರಿ ನೌಕರಸ್ಥರು, ವಕೀಲ ವೃತ್ತಿಯಲ್ಲಿರುವ ಅನೇಕ ಜನ ಕಲಾವಿದರು ದಟ್ಟಿ ಕುಣಿತ ಮಾಡುವುದು ಹೆಮ್ಮೆಯ ವಿಷಯ. ಮೂರು ತಲೆಮಾರುಗಳ ಹಿಂದೆ ಗ್ರಾಮದೇವಿಯ ಗುಡಿಯ ಮುಂದೆ ಮಾತ್ರ ಪ್ರದರ್ಶನ ಗೊಳ್ಳುತ್ತಿದ್ದ 'ದಟ್ಟಿ ಕುಣಿತ' ಇಂದು ದೇಹಲಿ, ರಾಜಸ್ಥಾನ, ಗುಜರಾತ, ಬೆಂಗಳೂರು, ಮೈಸೂರು ದಸರಾ, ಹಂಪಿ ಉತ್ಸವ, ಗುಲ್ಬರ್ಗಾ ಹಾಗೂ ಬೀದರ ಉತ್ಸವ, ಕಿತ್ತೂರು ಉತ್ಸವ, ಸಂಗೋಳ್ಳಿ ಉತ್ಸವ, ಬೆಳವಡಿ ಉತ್ಸವಗಳಲ್ಲಿ ಹಾಗೂ ಕನ್ನಡ– ಸಂಸ್ಕೃತ ಇಲಾಖಾ ಕಾರ್ಯಕ್ರಮಗಳಲ್ಲಿ ಮತ್ತು ಅನೇಕ ಜಾತ್ರೆ, ಜನಪದ ಕಲಾಮೇಳಗಳಲ್ಲಿ ಪ್ರದರ್ಶಿಸಿ ಕಲೆಯನ್ನು ದೇಶದಾದ್ಯಂತ ಹರಡಿಸಿದ್ದಾರೆ. ಈ ಕಲೆಯಿಂದಾಗಿ ಅನೇಕ ಕಲಾವಿದರಿಗೆ ರಾಜ್ಯ, ರಾಷ್ಟ್ರ, ಪ್ರಶಸ್ತಿಗಳು ಕೂಡಾ ಬಂದಿವೆ.

ದಟ್ಟಿ ಕುಣಿತಕ್ಕೆ ಹೆಚ್ಚು ಮೆರಗು ಬರುವುದು ವಾದ್ಯಮೇಳಗಳಿಂದ. ವಾದ್ಯಕಾರರು ಆದಿ ಗತ್ತಿನಿಂದ, ಬಯಲು ಗತ್ತಿನವರೆಗೆ ವಿವಿಧ ಗತ್ತುಗಳನ್ನು ಬಾರಿಸುತ್ತ ತಾಸು ಗಟ್ಟಲೇ ಕುಣಿಯುವ ಕಲಾವಿದರಿಗೆ ಶಕ್ತಿ ಹಾಗೂ ಚೈತನ್ಯವಾಗಿ ನಿಲ್ಲುತ್ತಾರೆ. ಗೋಕಾಕ ತಾಲೂಕಿನ ಧರ್ಮಟ್ಟಿ, ಉದಗಟ್ಟಿ, ತಳಕಟ್ಟನಾಳ, ವಡೇರಹಟ್ಟಿ, ಜೋಕಾನಟ್ಟಿ, ಹಡಗಿನಾಳ ಗ್ರಾಮಗಳಲ್ಲಿ ಇಂದಿಗೂ ಚಾಲ್ತಿಯಲ್ಲಿರುವ ಕಲೆ ಇದಾಗಿದೆ. ಗೋಕಾಕ ತಾಲೂಕಿನಲ್ಲೇ ಹುಟ್ಟಿ ಬೆಳೆದ ಈ ಕಲೆ ಇಡಿ ಉತ್ತರ ಕರ್ನಾಟಕ ಹಾಗೂ ಮಹಾರಾಷ್ಟ್ರದ ಅನೇಕ ಜಿಲ್ಲೆಗಳಲ್ಲಿ ಪ್ರಭಾವ ಬೀರಿ ಗೋಕಾಕ ನಾಡಿನ ಗೌರವ ಇಮ್ಮಡಿಗೊಳಿಸಿದೆ. ಅಳಿವಿನ ಅಂಚಿನಲ್ಲಿರುವ ಈ ದಟ್ಟಿ ಕುಣಿತ ಕಲೆಗಾಗಿ ಖ್ಯಾತ ಜನಪದ ಸಂಶೋಧಕ ಡಾ. ನಿಂಗಣ್ಣ ಸಣ್ಣಕ್ಕಿಯವರ ನಿರಂತರ ಪ್ರಯತ್ನದಿಂದ ಇಂದು ಈ ಕಲೆ ಉಳಿದುಕೊಂಡಿದೆ ಎಂದು ಸ್ವತಃ ಕಲಾವಿದರೇ ಹೇಳಿಕೊಳ್ಳುತ್ತಾರೆ.

## ಕಲೆಯ ಬೆಳವಣಿಗೆ ಮತ್ತು ಕಲಾವಿದರು:

ಜನಪದ ಕಲಾವಿದರಲ್ಲಿ ನೂರಕ್ಕೆ ತೊಂಬತ್ತೊಂಬತ್ತರಷ್ಟು ಕಲಾವಿದರು ಅನಕ್ಷರಸ್ಥರಾಗಿರುತ್ತಾರೆ. ಇಲ್ಲವೇ 5–6ನೇ ತರಗತಿ ವರೆಗೆ ಓದಿದವರಿದ್ದಾರೆ. ಪಿ.ಯು.ಸಿ, ಡಿಗ್ರಿ ಹಾಗೂ ಎಂ.ಎ, ಎಲ್.ಎಲ್.ಬಿ ಕಲಿತು ವೃತ್ತಿಯಲ್ಲಿರುವ ಯಾವ ವ್ಯಕ್ತಿಯು ಕಲಾವಿದನಾಗಿ ಇಂದು ಉಳಿದಿಲ್ಲ. ಆದರೆ ವಿದ್ಯಾವಂತರು, ಸರ್ಕಾರಿ ನೌಕರಸ್ಥರು, ವಕೀಲರು ದಟ್ಟಿ ಕುಣಿತ ಮಾಡುತ್ತಾರೆಂಬುದನ್ನು ನೋಡಲು ಗೋಕಾಕ ತಾಲೂಕಿನ ಕಲಾವಿದರೆ ಸಾಕ್ಷಿ. ಹಿಂದೆ ಯಕ್ಷಗಾನದಂತ ಬಯಲಾಟವನ್ನು ಡಾ. ಶಿವರಾಮ ಕಾರಂತರು ಮಾಡಿದುಂಟು, ಜನಪದ ದಟ್ಟಿ ಕುಣಿತ ಉಳಿಯಬೇಕು, ಬೆಳಿಬೇಕು ಎಂಬ ಮಹದಾಸೆಯಿಂದ ತಮ್ಮ ಮನೆತನದಲ್ಲಿದ್ದ ಕಲೆಯನ್ನು ದೇಶಾದ್ಯಂತ ಹರಡಬೇಕೆಂಬ ಛಲದಿಂದ ಫಣತ್ತೊಟ್ಟು ನಿಂತ ಕಲಾವಿದರು ಇಲ್ಲಿದ್ದಾರೆ. ಅನಕ್ಷರಸ್ಥರೇ ಭಕ್ತಿಗಾಗಿ ಮಾಡಿಕೊಂಡು ಬಂದ ಕಲೆ ಇಂದು ವಿದ್ಯಾವಂತರನ್ನು ಆವರಿಸಿಕೊಂಡದ್ದು ವಿಸ್ಮಯವೇ ಸರಿ. ಈ ದಟ್ಟಿ ಆಟವನ್ನು ಜನಪದ ವಿದ್ವಾಂಸರಾದ ಡಾ. ನಿಂಗಣ್ಣ ಸಣ್ಣಕ್ಕಿ, ಡಾ.ಸಿ.ಕೆ. ನಾವಲಗಿ, ಬೆಟಗೇರೆ ಕೃಷ್ಣಶರ್ಮರಂತವರೆಲ್ಲರೂ ಪ್ರಶಂಸಿದ್ದಾರೆ. ಆಧುನಿಕವಾಗಿ ದಟ್ಟಿ ಕುಣಿತ ಮಾರ್ಪಾಡು ಹೊಂದುತ್ತ ಜನಾಕರ್ಷನೆಗೆ ಒಳಗಾದ ಕಲೆ ಇದಾಗಿದೆ. ದಟ್ಟಿ ಕುಣಿತ ಕಲಾವಿದರಲ್ಲಿ ಹೆಚ್ಚಾಗಿ ಡೋಳ್ಳಿನ ಹಾಡು, ಡೊಳ್ಳು ಕುಣಿತದಲ್ಲಿಯೂ ಪ್ರಾವಿಣ್ಯತೆ ಪಡೆದುಕೊಂಡಿದ್ದಾರೆ. ತಾಸುಗಟ್ಟಲೇ ಬೆಸರವಿಲ್ಲದೆ ಕುಣಿಯುವ ಚೈತನ್ಯ ವಯಸ್ಕರಿಗೂ ಇದೆ. ಗೋಕಾವಿ ನಾಡಿನಲ್ಲಿ ಈ ಕುಣಿತಕ್ಕೆ **ಆಳುಮಕ್ಕಳ ಕುಣಿತ** ಎಂದೇ ಕರೆಯುವುದು ರೂಢಿಯಾಗಿದೆ.

ದಟ್ಟಿ ಕುಣಿತ ಕಲಾವಿದರ ವಸ್ತ್ರಾಭರಣ, ಕುಣಿತ ಕಸರತ್ತು ಹಾಗೂ ವಾದ್ಯ ಮೇಳಗಳೊಂದಿಗೆ ಆಕರ್ಷಿಸಲ್ಪಡುವ ಶುದ್ದ ದೇಶಿಯಕಲೆ. ಮನರಂಜನೆ, ಭಕ್ತಿ ಹಾಗೂ ಉತ್ಸಾಹಗಳು ಕಲಾವಿದರ ಮುಖ್ಯ ಅಭಿಲಾಸೆಯಾಗಿವೆ. ಬಾಲ ಕಲಾವಿದರಿಂದ ಹಿಡಿದು ಮುದುಕರು ಕೂಡಾ ಸಮವಸ್ತ್ರ ಧರಿಸಿ ಕುಣಿಯುಯುವುದು ಸಾಮಾನ್ಯವಲ್ಲ. ಭಕ್ತಿಯಿಂದ, ಭಕ್ತಿಗಾಗಿ ಹುಟ್ಟಿಕೊಂಡಿರುವ ಇಂತಹ ಕಲೆ, ಕಲಾವಿದರು ಗೋಕಾವಿ ನಾಡಿನ ಸಂಸ್ಕೃತಿಯ ಪ್ರತೀಕ. ಯಾರ ಒತ್ತಾಯ, ಒತ್ತಾಸೆ ಇಲ್ಲದೆ ಸ್ವಯಂ ಪ್ರೇರಿತರಾಗಿ ಕಲಾವಿದರಾಗಿ ಬೆಳೆದುಬಂದವರು.

ದಟ್ಟಿ ಕುಣಿತದ ತಂಡಗಳ ನಿರ್ಮಾಣ, ತರಬೇತಿ, ಕುಣಿಯುವಾಗ ವಾದ್ಯಗಳ ಅವಶ್ಯಕತೆ ಹಾಗೂ ಕುಣಿತದ ಪ್ರಕಾರಗಳನ್ನು ಲೇಖನ ಪ್ರಸ್ತಾಪಿಸಿದೆ. ಕುರುಬ ಹಾಗೂ ಬೇಡರ ಜನಾಂಗದಲ್ಲಿ ಹುಟ್ಟಿಕೊಂಡ ಕಲೆ ಇಂದು ದೇಶಾದ್ಯಂತ್ಯ ಪ್ರದರ್ಶನಗೊಳುತ್ತಿರುವುದು ಹೆಮ್ಮೇಯ ಸಂಗತಿ. **ಡಾ.ನಿಂಗಣ್ಣ ಸಣ್ಣಕ್ಕಿ** ಹಾಗೂ ಈ ದಟ್ಟಿ ತಂಡಗಳಿಗೆ ಅವಿನಾಭಾವಿ ಸಂಬಂಧ ಇರುವುದು ಸಂಶೋಧನೆಯಿಂದ ತಿಳಿದು ಬರುತ್ತದೆ. ಪ್ರೋತ್ಸಾಹ ಮತ್ತು ಪ್ರಯತ್ನದಿಂದ ಇಂತ ಅದ್ಬುತ ಕಲೆ ಇಂದು ಹೆಮ್ಮರವಾಗಿ ಬೆಳೆದು ನಿಲ್ಲಲು ಕಾರಣವಾಗಿದೆ. ಈ ಕಲೆಯನ್ನು ಕುರಿತು ಇನ್ನೂ ಸಂಶೋಧನೆ ನಡೆಯಬೇಕಾಗಿದೆ. ಸಿಕ್ಕ ಮಾಹಿತಿಗಳಿಂದ ಈ ಲೇಖನ ರಚಿಸಲಾಗಿದೆ. ದಟ್ಟಿ ಕುಣಿತ ಭಾರತಿಯ ಸಾಂಸ್ಕೃತಿಕ ಪರಂಪರೆಯ ಅತಿಮುಖ್ಯವಾದ ಕಲೆ ಅನ್ನಿಸುತ್ತದೆ. ದೇವಿಯ ಭಕ್ತಿಗಾಗಿ ಹುಟ್ಟಿಕೊಂಡರೂ ಇಂದು ಅದ್ಬುತವಾಗಿ ಬೆಳೆಯುತ್ತಿದೆ. ಗೋಕಾಕ ತಾಲೂಕಿನಲ್ಲಿ ಹುಟ್ಟಿದ ದಟ್ಟಿ ಕುಣಿತ ಕಲೆ ಜಗತ್ತಿನ ಶ್ರೇಷ್ಠ ಜನಪದ ಕಲೆಗಳಲ್ಲಿ ಒಂದಾಗಿ ಬೆಳೆಯಲೆಂಬುದೆ ಲೇಖನದ ಆಶೆಯಾಗಿದೆ.

## ಆಕರಗಳು


1) ಡಾ. ನಿಂಗಣ್ಣ ಸಣ್ಣಕ್ಕಿ : ಜಾನಪದ ಜಯಂತಿ
2) ಸಂ.ಪ್ರೋ. ಚಂದ್ರಶೇಖರ ಅಕ್ಕಿ ಮತ್ತು ಶ್ರೀ ಮಹಾಲಿಂಗ ಮಂಗಿ : ಗೋಕಾವಿ ನಾಡಿನ ಸಿರಿ ಸಂಪದ.


**ಮಾಹಿತಿ ನೀಡಿದವರು**

1) ಬಾಳಪ್ಪ ಭೀಮಪ್ಪ ಲೋಕುರಿ (ಧರ್ಮಟ್ಟಿ ) : ದಟ್ಟಿ ಕುಣಿತ ಕಲಾವಿದರು
2) ಉದ್ದಣ್ಣ ಸಣ್ಣತಮ್ಮಪ್ಪ ಗೋಡೇರ ( ಉದಗಟ್ಟಿ ) : ವಕೀಲರು ಹಾಗೂ ದಟ್ಟಿ ಕುಣಿತ ಕಲಾವಿದರು
3) ಮಹಾದೇವ ಈರಪ್ಪ ಪಾರ್ವತಿ ( ಹಡಿಗಿನಾಳ) : ದಟ್ಟಿ ಕುಣಿತ ಕಲಾವಿದರು
4) ಶ್ರೀ ಲಕ್ಷ್ಮೀದೇವಿ ದಟ್ಟಿ ಕುಣಿತ ಮೇಳ ( ತಳಕಟ್ಟನಾಳ ) : ದಟ್ಟಿ ಕುಣಿತ ಕಲಾವಿದರು




**ಮಹಾದೇವ ಚಂದ್ರಪ್ಪ ಪೋತರಾಜ**
**ಸಂಶೋಧನಾ ವಿದ್ಯಾರ್ಥಿ, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ವಿದ್ಯಾಸಂಗಮ, ಬೆಳಗಾವಿ.**